**ಅಸಲು ದಾವೆ ಸಂಖ್ಯೆ.104/2019**
**ಪಿ.ಡಬ್ಲ್ಯು:1**

**ದಿನಾಂಕಃ03.01.2023 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ. ಎಸ್.ಎನ್.ಜಿ ವಕೀಲರಿಂದಃ-**

ದಾವಾ ಆಸ್ತಿಯಲ್ಲಿ ಯಾವುದೇ ಬೆಳೆಯನ್ನು ಬೆಳೆದಿರುವುದಿಲ್ಲ ಎಂದರೆ ಸರಿಯಲ್ಲ. ನಾನು ದಾವಾ ಸ್ವತ್ತಿನಲ್ಲಿ ಸುಮಾರು 30 ಗುಂಟೆ ಜಮೀನಿನಲ್ಲಿ ಬೆಳೆಯನ್ನು ಬೆಳೆಯುತ್ತಿದ್ದೇನೆ. ವಾದಿ ಪುಟ್ಟಸ್ವಾಮಿ ನನ್ನ ತಂದೆಯಾಗಿರುತ್ತಾರೆ. ನನ್ನ ತಂದೆಯವರು ಈ ದಾವೆಯನ್ನು 1 ಎಕರೆ 10 ಗುಂಟೆ ಜಮೀನಿನ ಮೇಲೆ ಸಲ್ಲಿಸಿರುತ್ತಾರೆ. ಪ್ರತಿವಾದಿ ಸುಮಾರು 25 ಗುಂಟೆ ವಿಸ್ತೀರ್ಣದಲ್ಲಿ ಸ್ವಾಧೀನ ಇರುತ್ತಾರೆ. 2013 ನೇ ಸಾಲಿನಿಂದ ಇಲ್ಲಿಯವರೆಗೆ ದಾವಾ ಸ್ವತ್ತಿನ ಪೈಕಿ ಸುಮಾರು 20 ಗುಂಟೆ ಯಲ್ಲಿ ಪ್ರತಿವಾದಿಗಳು ಸ್ವಾಧೀನ ಇರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿ ನನ್ನ ತಂದೆಯ ಕಡೆಯಿಂದ 1 ಎಕರೆ 10 ಗುಂಟೆಯ ವಿಸ್ತೀರ್ಣದ ಸ್ವಾಧೀನವನ್ನು ಪಡೆದುಕೊಂಡಿರುವುದಿಲ್ಲ ಎಂದರೆ ಸರಿ. ನನಗೆ ತಿಳಿದ ಮಟ್ಟಿಗೆ ಪ್ರತಿವಾದಿ 2016 ರಿಂದ 25 ಗುಂಟೆ ಆಸ್ತಿಯಲ್ಲಿ ಸ್ವಾಧೀನ ಇರುತ್ತಾರೆ.

2. ಪ್ರತಿವಾದಿ ನನಗೆ ಹುಟ್ಟಿದಾಗಿನಿಂದ ಪರಿಚಯ ಇರುತ್ತಾರೆ. ಪ್ರತಿವಾದಿ ಕೆಂಚರಾಯಸ್ವಾಮಿ ದೇವಸ್ಥಾನದಲ್ಲಿ ಪೂಜೆ ಮಾಡುತ್ತಾರೆ. ಸದರಿ ದೇವಸ್ಥಾನ ಸಖರಾಯಪಟ್ಟಣ ಮತ್ತು ಬಾಣಾವರ ಹೋಗುವ ಮಾರ್ಗದ ಎಡಭಾಗದಲ್ಲಿ ಮೊದಲು ಇತ್ತು ಎಂದರೆ ಸರಿ. 2013 ನೇ ಸಾಲಿನಲ್ಲಿ ಸದರಿ ದೇವಸ್ಥಾನವನ್ನು ದಾವಾ ಸ್ವತ್ತಿನ ವಿಸ್ತೀರ್ಣದ ಪೈಕಿ 20 ಗುಂಟೆ ಆಸ್ತಿಯಲ್ಲಿ ಬದಲಾವಣೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ದೇವಸ್ಥಾನದ ಆದಾಯದಿಂದ ಮಾತ್ರ ಪ್ರತಿವಾದಿಯು ಜೀವನ ನಡೆಸುತ್ತಾರೆ ಎಂದರೆ ಸರಿಯಲ್ಲ. ದಿನಾಂಕಃ 15.01.2016 ರಂದು ನಮ್ಮ ಪ್ರತಿವಾದಿ ನಡುವೆ ಯಾವುದೇ ಮಾತುಕತೆ ನಡೆದಿರುವುದಿಲ್ಲ ಆದರೆ 05.01.2016 ರಂದು ಮಾತುಕತೆಯಾಗಿರುತ್ತದೆ ಆದರೆ ನಾನು ಹಾಜರಿರುವುದಿಲ್ಲ. ಸದರಿ ಮಾತುಕತೆಯ ಬಗ್ಗೆ ನನ್ನ ತಂದೆಯವರು ನನಗೆ ತಿಳಿಸಿರುತ್ತಾರೆ. ನನ್ನ ತಂದೆಯವರು ತಾತ್ಕಾಲಿಕವಾಗಿ ದೇವಸ್ಥಾನ ನಿರ್ಮಿಸಲು ಪ್ರತಿವಾದಿಗೆ

ಸರ್ವೆ ನಂ.ನಲ್ಲಿ ಆಸ್ತಿ ನೀಡಿರುತ್ತಾರೆ. ಪ್ರತಿವಾದಿ ಬೇರೆಕಡೆ ಜಾಗ ಲಭ್ಯವಾದ ನಂತರ ವಾಪಸ್ಸು ನೀಡುತ್ತೇವೆಂದು ಹೇಳಿರುತ್ತಾರೆ. ಶಾಶ್ವತವಾಗಿ ಕಟ್ಟಡ ನಿರ್ಮಾಣ ಮಾಡುವ ಬಗ್ಗೆ ಮಾತುಕತೆ ಆಗಿರುವುದಿಲ್ಲ. ದಾವಾ ಸ್ವತ್ತಿನಲ್ಲಿ ದೇವಸ್ಥಾನದ ಕಟ್ಟಡ ಇದೆ ಎಂದರೆ ಸರಿ, ಸದರಿ ದೇವಸ್ಥಾನಕ್ಕೆ ಭಕ್ತಾದಿಗಳು ಬರುತ್ತಾರೆ ಎಂದರೆ ಸರಿ. ಭಕ್ತಾಧಿಗಳು ಬರುವ ಸಲುವಾಗಿ ತಗಡಿನ ತಂಗುದಾಣ ನಿರ್ಮಿಸಿರುತ್ತಾರೆ ಎಂದರೆ ಸರಿ. ಸದರಿ ಕಟ್ಟಡವನ್ನು ತಳಪಾಯ ನಿರ್ಮಿಸಿ ಕಾಯಂ ಆಗಿ ಕಟ್ಟಡ ನಿರ್ಮಿಸಿರುತ್ತಾರೆ ಎಂದರೆ ಸರಿಯಲ್ಲ. ಈ ಹಂತದಲ್ಲಿ ಸಾಕ್ಷಿಗೆ ಒಂದು ಭಾವಚಿತ್ರವನ್ನು ತೋರಿಸಿ ಸದರಿ ಭಾವಚಿತ್ರದಲ್ಲಿ ದೇವಸ್ಥಾನ ಇದೆ ಎಂದು ಒಪ್ಪಿಕೊಂಡ ಕಾರಣ ಇದನ್ನು ನಿಡಿ-1 ಎಂದು ಗುರುತಿಸಲಾಯಿತು. ತಗಡಿನ ತಂಗುದಾಣ ಸುತ್ತಲೂ ಕಾಂಪೌಂಡ್ ನಿರ್ಮಾಣ ಮಾಡಲು ಕಟ್ಟಡ ಸಾಮಾಗ್ರಿಗಳನ್ನು ಶೇಖರಣೆ ಮಾಡಿರುತ್ತಾರೆ ಎಂದರೆ ಸರಿ. ಸಾಕ್ಷಿಯು ಈ ಹಂತದಲ್ಲಿ ಎರಡು ಭಾವಚಿತ್ರಗಳನ್ನು ತೋರಿಸಿ ಸದರಿ ಭಾವಚಿತ್ರದಲ್ಲಿ ದೇವಸ್ಥಾನ ಇರುವ ಕಾರಣ ಇದನ್ನು ನಿಡಿ-2 ಮತ್ತು 3 ಎಂದು ಗುರುತಿಸಲಾಯಿತು. ದಾವಾ ಸಲ್ಲಿಸುವ ಪೂರ್ವದಲ್ಲಿ ಪ್ರತಿವಾದಿಗೆ ನೊಟೀಸ್ ನ್ನು ಜಾರಿ ಮಾಡಿರುತ್ತೇವೆ. ಸದರಿ ನೊಟೀಸ್ ನಲ್ಲಿ ವಿಸ್ತೀರ್ಣವನ್ನು ನಮೂದು ಮಾಡಿರುವುದಿಲ್ಲ.

3. ನನ್ನ ತಂದೆಯಿಂದ ಪ್ರತಿವಾದಿ ಸುಮಾರು 20 ಗುಂಟೆ ವಿಸ್ತೀರ್ಣವನ್ನು ಮೌಖಿಕವಾಗಿ ಒಪ್ಪಂದ ಕರಾರು ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಮೌಖಿಕ ಒಪ್ಪಂದದ ಪ್ರಕಾರ ಪ್ರತಿವಾದಿಯಿಂದ ನನ್ನ ತಂದೆ ರೂ. 5 ಲಕ್ಷ ಹಣವನ್ನು ಚೆಕ್ಕಿನ ಮೂಲಕ ಮತ್ತು ಉಳಿದ 18 ಲಕ್ಷ ಹಣವನ್ನು ನಗದು ರೂಪದಲ್ಲಿ ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಕಿಟ್ಟಣ್ಣ ಮತ್ತು ಬಸವರಾಜಪ್ಪರವರು ಗೊತ್ತು. ನನ್ನ ತಂದೆ ಮತ್ತು ಪ್ರತಿವಾದಿ ನಡುವೆ ಕರಾರು ಆಗುವಾಗ ಮತ್ತು ಪ್ರತಿವಾದಿಯಿಂದ ನನ್ನ ತಂದೆ 23 ಲಕ್ಷ ಹಣ ಪಡೆದುಕೊಂಡಾದ ಕಿಟ್ಟಣ್ಣ, ಬಸವರಾಜಪ್ಪ, ಆನಂದ ಮತ್ತು ತಿಮ್ಮಪ್ಪ, ರಾಜೇಗೌಡ ಇದ್ದರೂ ಎಂದರೆ ಸರಿಯಲ್ಲ.

4. ದಾವಾ ಸ್ವತ್ತಿನಲ್ಲಿ ನಾವು ಒಂದು ಕೊಳವೆ ಬಾವಿಯನ್ನು ಕೊರೆಸಿರುತ್ತೇವೆ. ಪ್ರತಿವಾದಿಯು ಸಹ ಒಂದು ಕೊಳವೆ ಬಾವಿಯನ್ನು ಕೊರೆಸಿರುತ್ತಾರೆ. ಪ್ರತಿವಾದಿ ಸ್ವಾಧೀನ

ಇರುವ 20 ಗುಂಟೆ ಆಸ್ತಿಯಲ್ಲಿ ಕೊಳವೆ ಬಾವಿ ಇರುತ್ತದೆ. ಪ್ರತಿವಾದಿ ಕೊಳವೆ ಬಾವಿ , ತಗಡಿನ ತಂಗುದಾಣ ನಿರ್ಮಿಸುವಾಗ 2017 ನೇ ಸಾಲಿನಲ್ಲಿ ತಕರಾರು ಮಾಡಿರುತ್ತೇವೆ. ನಾವು ಪ್ರತಿವಾದಿಗೆ ದಾವಾ ಸ್ವತ್ತಿನಲ್ಲಿ ಕಟ್ಟಡ ನಿರ್ಮಾಣ ಮಾಡಲು ಕೊಳವೆ ಬಾವಿ ನಿರ್ಮಿಸಲು ಅನುಮತಿ ನೀಡಿರುತ್ತೇವೆಂದರೆ ಸರಿಯಲ್ಲ. ನನ್ನ ತಂದೆ 23 ಲಕ್ಷ ಹಣವನ್ನು ಪ್ರತಿವಾದಿಯಿಂದ ಪಡೆದುಕೊಂಡು 20 ಗುಂಟೆ ಆಸ್ತಿಯನ್ನು ಬಿಟ್ಟುಕೊಟ್ಟಿದ್ದು ಅಂದಿನಿಂದ ಪ್ರತಿವಾದಿ ಸ್ವಾಧೀನ ಹೊಂದಿದ್ದರೂ ಸಹ ಈಗ ಆಸ್ತಿಯ ಬೆಲೆ ಜಾಸ್ತಿ ಇರುವುದರಿಂದ ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿ ನನ್ನ ತಂದೆಗೆ ಮೌಖಿಕ ಕರಾರನ್ನು ನೊಂದಣಿಮಾಡಿಕೊಡಲು ದಾಖಲಾತಿಗಳನ್ನು ಸರಿಪಡಿಸಿಕೊಳ್ಳುವಂತೆ ಸೂಚಿಸಿದ್ದರೂ ಎಂದರೆ ಸರಿಯಲ್ಲ. ಪ್ರತಿವಾದಿಗೆ ಮೋಸಮಾಡಬೇಕೆಂದು ನನ್ನ ತಂದೆಯ ಮಾತುಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಪ್ರತಿವಾದಿಗೆ ಕ್ರಯಪತ್ರ ನೊಂದಣಿ ಕ್ರಯಪತ್ರವನ್ನು ಮಾಡಿಸಿಕೊಳ್ಳುವುದನ್ನು ತಪ್ಪಿಸುವ ಸಲುವಾಗಿ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಕಿಟ್ಟಣ್ಣ, ಬಸವರಾಜು, ತಿಮ್ಮಯ್ಯರವರ ನಡುವೆ ವೈಶಮ್ಯ ಇರುತ್ತದೆ.

**ಮರು ವಿಚಾರಣೆಃ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇ

Sd/-

ಒಂದನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು, ಕಡೂರು.